ಭಾರತ ಹುಲಿಗಳ ತವರು. ವಿಶ್ವದಲ್ಲಿನ ಒಟ್ಟು ಹುಲಿಗಳಲ್ಲಿ ಶೇ. 75ಕ್ಕೂ ಹೆಚ್ಚು ಭಾರತದಲ್ಲಿಯೇ ಇವೆ. ಈ ಹಿರಿಮೆಗೆ ಪುಷ್ಟಿ ಕೊಡುವಂತೆ ಭಾರತದ ರಾಷ್ಟ್ರೀಯ ಪ್ರಾಣಿ ಎನ್ನುವ ಗರಿಮೆಯೂ ಹುಲಿಗೆ ದೊರೆತಿದೆ. ಈ ವಿಶೇಷಣಗಳ ಹಿನ್ನೆಲೆಯಲ್ಲಿ, ಭಾರತವನ್ನು ಹುಲಿಗಳ ಸ್ವರ್ಗ ಎಂದೇನೂ ಭಾವಿಸುವಂತಿಲ್ಲ ಹಾಗೂ ಇಲ್ಲಿನ ಕಾಡುಗಳಲ್ಲಿ ಲಕ್ಷ ಲಕ್ಷ ಹುಲಿಗಳಿವೆ ಎಂದುಕೊಳ್ಳುವಂತಿಲ್ಲ. ಸದ್ಯದ ಅಂಕಿಅಂಶಗಳ ಪ್ರಕಾರ, ಭಾರತದಲ್ಲಿರುವ ಹುಲಿಗಳ ಸಂಖ್ಯೆ 3,167.

ಜೈವಿಕ ಸಮತೋಲನವನ್ನು ಕಾಪಾಡುವಲ್ಲಿ ಹುಲಿಗೆ ವಿಶೇಷ ಮಹತ್ವವಿದೆ. ಕಾಡುಗಳ ಸಮೃದ್ಧಿಗೂ ಹುಲಿಗಳ ಸಮೃದ್ಧಿಗೂ ಸಂಬಂಧವಿದೆ. ಈಗ ಹುಲಿಗಳ ಸಂತತಿ ಕ್ಷೀಣಿಸುತ್ತಿದೆಯೆಂದರೆ, ಕಾಡುಗಳ ಸವಕಳಿಯೂ ತೀವ್ರವಾಗಿದೆ ಎಂದರ್ಥ. ಆ ಕಾರಣದಿಂದಲೇ ಹುಲಿಗಳ ಕುರಿತ ಕಾಳಜಿ ಮತ್ತು ಆತಂಕ ಕಾಡುಗಳ ಸಂರಕ್ಷಣೆಗೂ ಸಂಬಂಧಿಸಿದ್ದಾಗಿದೆ.

ಹುಲಿಗಳ ಸಂರಕ್ಷಣೆಯ ಅರಿವು ನಮ್ಮಲ್ಲಿ ಮೂಡಿದ್ದು ಸ್ವಾತಂತ್ರ್ಯಾನಂತರದಲ್ಲಿ, ತೀರಾ ತಡವಾಗಿ. 1971ಕ್ಕೂ ಮುನ್ನ ದೇಶದಲ್ಲಿ ಹುಲಿಗಳನ್ನು ಬೇಟೆಯಾಡುವುದು ರಾಜ ಮಹಾರಾಜರುಗಳಿಗೆ ಮೋಜಿನ ಆಟವಾಗಿತ್ತು. ಬ್ರಿಟಿಷರ ಆಳ್ವಿಕೆಯಲ್ಲಿ ಹುಲಿಗಳನ್ನು ಕೊಲ್ಲಲು ಸ್ಥಳೀಯರಿಗೆ ಪ್ರೋತ್ಸಾಹಧನ ನೀಡಲಾಗುತ್ತಿತ್ತು. ಈ ಎಲ್ಲ ಕಾರಣಗಳಿಂದ ಹುಲಿಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಂಡುಬಂದಿತ್ತು.

ಇಂದಿರಾ ಗಾಂಧಿ ಅವರು ಪ್ರಧಾನ ಮಂತ್ರಿಯಾದ ಸಂದರ್ಭದಲ್ಲಿ 'ವನ್ಯಜೀವಿ ಸಂರಕ್ಷಣಾ ಕಾಯ್ದೆ'ಯನ್ನು ಜಾರಿಗೆ ತರಲಾಯಿತು. ಅದರ ಮೂಲಕ, ವನ್ಯ ಜೀವಿಗಳ ಸಂರಕ್ಷಣೆಗೆ ಒತ್ತು ದೊರೆಯಿತು ಹಾಗೂ ವನ್ಯಜೀವಿಗಳ ಮಹತ್ವದ ಕುರಿತು ಅರಿವು ಮೂಡಿಸುವ ಕೆಲಸವೂ ನಡೆಯಿತು. 1973ರ ಏಪ್ರಿಲ್ 1ರಂದು ಜಾರಿಗೆ ತಂದ 'ಹುಲಿ ಯೋಜನೆ'ಯೂ ವ್ಯಾಘ್ರ ಸಂತತಿ ಸಂರಕ್ಷಣೆಗೆ ಬಲ ನೀಡಿತು.

ವೈವಿಧ್ಯದಿಂದ ಕೂಡಿದ ಪರಿಸರ ವ್ಯವಸ್ಥೆಯಲ್ಲಿ ಒಂದು ಜೀವಿಯನ್ನು 'ಕೀ ಸ್ಟೋನ್' ಅಥವಾ 'ಮೂಲ ಪ್ರಭೇದ' ಎಂದು ಗುರುತಿಸಲಾಗಿರುತ್ತದೆ. ಆ ಪ್ರಭೇದದ ಜೀವಿಗಳ ಸಂಖ್ಯೆಯ ಆಧಾರದ ಮೇಲೆ ಆ ಇಡೀ ಪರಿಸರದಲ್ಲಿ ವಾಸವಾಗಿರುವ ವಿವಿಧ ಬಗೆಯ ಜೀವಿಗಳ ಗಣತಿಯನ್ನು ಮಾಡಬಹುದಾಗಿದೆ. ಹುಲಿ ಅಂತಹ 'ಮೂಲ ಪ್ರಭೇದ'ಗಳಲ್ಲಿ ಒಂದು. ಹುಲಿಗಳ ಸಂಖ್ಯೆಯನ್ನಾಧರಿಸಿ, ಇನ್ನುಳಿದ ಜೀವಿಗಳನ್ನು ಅವುಗಳ ಅಂದಾಜು ಸಂಖ್ಯೆಗಳನ್ನು ಲೆಕ್ಕಿಸಬಹುದು. ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಜಾರಿಗೆ ಬಂದಿದ್ದ 'ಪ್ರಾಜೆಕ್ಟ್ ಟೈಗರ್'ಗೆ ಇದು 50ನೇ ವರ್ಷದ ಸಂಭ್ರಮ. ಹುಲಿಗಳ ಲೋಕದಲ್ಲಿ ಇಣುಕಿ ನೋಡಲು ಇದಕ್ಕೂ ಮಿಗಿಲಾದ ಸಂದರ್ಭ ಬೇಕೆ?

ಹುಲಿಗಳ ಸಂರಕ್ಷಣೆಯ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳಿದ್ದು, ಇವುಗಳು ಸಂರಕ್ಷಣೆ ತಕ್ಕಮಟ್ಟಿಗೆ ಪರಿಣಾಮಕಾರಿಯಾಗಿ ನಡೆಯುತ್ತಿವೆ. ಆದರೆ, ಈ ಕಾಳಜಿ–ಕಾರ್ಯಕ್ರಮ ಮತ್ತಷ್ಟು ವೇಗ ಪಡೆದುಕೊಳ್ಳಬೇಕಾದ ತುರ್ತು ಇಂದಿನದು. ಪರಿಸರ ಸಂರಕ್ಷಣೆ ಹಾಗೂ ವನ್ಯಜೀವಿ ಸಂರಕ್ಷಣೆಯ ಪಾಠಗಳನ್ನು ನಾವು ಇತಿಹಾಸದಲ್ಲಿ ಮಾಡಿದ ತಪ್ಪುಗಳಿಂದ ಕಲಿಯಬೇಕಾಗಿದೆ. ಅಂತಹ ಪ್ರಮಾದಗಳಲ್ಲೊಂದು, ಅವನಿಯ ದುರಂತ.

ಅವನಿ ಎನ್ನುವುದು ಭೂಮಿಯ ಹೆಸರುಗಳಲ್ಲೊಂದು. ಅವನಿ ಎನ್ನುವ ಹುಲಿಯೊಂದರ ಕರುಣಾಜನಕ ಕಥೆಯನ್ನು ನೆನಪಿಸಿಕೊಂಡರೆ, ಅದು ಭೂಮಿಯ ಸಂಕಷ್ಟದ




**ಅತಿಹೆಚ್ಚು ಹುಲಿಗಳಿರುವ ರಾಜ್ಯಗಳು**
(ಹುಲಿಗಣತಿ-2018ರ ಅಂಕಿಅಂಶ)

| ರಾಜ್ಯ | ಹುಲಿಗಳು |
|---|---|
| ಮಧ್ಯಪ್ರದೇಶ | 526 |
| ಕರ್ನಾಟಕ | 524 |
| ಉತ್ತರಾಖಂಡ | 442 |
| ಮಹಾರಾಷ್ಟ್ರ | 312 |
| ತಮಿಳುನಾಡು | 264 |
| ಅಸ್ಸಾಂ | 190 |
| ಕೇರಳ | 190 |